ಶ್ರೀ. ಬಿ ಡಿ ಕೆಂಚರೆಡ್ಡಿ ಇವರು ಮೆ: ಕಾಮಕೇರಿ ಸುಣ್ಣದ ಕಲ್ಲು ಗಣಿಗಾರಿಕೆ, ಕಾಮಕೇರಿ ಗ್ರಾಮ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ, ಪಟ್ಟಾ ಜಮೀನಿನ ಸರ್ವೆ ನಂ. 87(ಪಿ) ರಲ್ಲಿ ಒಟ್ಟು 4.49 ಹೆಕ್ಟೇರ್ ಪ್ರದೇಶದಲ್ಲಿ ವರ್ಷಕ್ಕೆ 1,20,000 ಟನ್ ಗಳಷ್ಟು ಸುಣ್ಣದಕಲ್ಲು ಗಣಿಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಇದರ ಪ್ರಯುಕ್ತ ಉದ್ದೇಶಿತ ಯೋಜನೆಯ ಹಿನ್ನೆಲೆಯಲ್ಲಿ ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಕೆಗಳು.

ದಿನಾಂಕ : 10-06-2022.

ವೇಳೆ : ಬೆಳಿಗ್ಗೆ 11:45 ಘಂಟೆ,

ಸ್ಥಳ : ಶ್ರೀ. ಬಿ ಡಿ ಕೆಂಚರೆಡ್ಡಿರವರ ಪಟ್ಟಾ ಜಮೀನಿನ ಉದ್ದೇಶಿತ ಯೋಜನಾ ಸ್ಥಳದಲ್ಲಿ, ಸರ್ವೆ ನಂ. 87(ಪಿ). ಕಾಮಕೇರಿ ಗ್ರಾಮ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಶ್ರೀ. ಬಿ ಡಿ ಕೆಂಚರೆಡ್ಡಿ ಇವರು ಮೆ: ಕಾಮಕೇರಿ ಸುಣ್ಣದಕಲ್ಲು ಗಣಿಗಾರಿಕೆ, ಕಾಮಕೇರಿ ಗ್ರಾಮ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ, ಪಟ್ಟಾ ಜಮೀನಿನ ಸರ್ವೆ ನಂ. 87(ಪಿ) ರಲ್ಲಿ ಒಟ್ಟು 4.49 ಹೆಕ್ಟೇರ್ ಪ್ರದೇಶದಲ್ಲಿ ವರ್ಷಕ್ಕೆ 1,20,000 ಟನ್ ಗಳಷ್ಟು ಸುಣ್ಣದಕಲ್ಲು ಗಣಿಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಈ ದಿನಾಂಕ: 10-06-2022 ರಂದು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | | |
|---|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : | ಶ್ರೀ. ಬಿ ಡಿ ಕೆಂಚರೆಡ್ಡಿರವರ ಪಟ್ಟಾ ಜಮೀನಿನ ಉದ್ದೇಶಿತ ಯೋಜನಾ ಸ್ಥಳದಲ್ಲಿ, ಸರ್ವೆ ನಂ. 87(ಪಿ). ಕಾಮಕೇರಿ ಗ್ರಾಮ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ. |
| ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | : | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | : | ಅನುಬಂಧ-4 |
| ಶಕ್ತಿ ಬಿಂದು ಪ್ರದರ್ಶನದ ವಿವರಗಳು | : | ಅನುಬಂಧ-5 |
| ಪಾಲುದಾರಿಕೆಯ ದಾಖಲೆ | : | ಅನುಬಂಧ-6 |

ಕೇಂದ್ರ ಅರಣ್ಯ, ಪರಿಸರ ಹಾಗೂ ಆಘಾತ ಅಧ್ಯಯನ ಅಧಿಸೂಚನೆ, ಇವರು ದಿನಾಂಕ 14-09-2006 ಮತ್ತು ತದನಂತರದ ತಿದ್ದುಪಡಿ ಹೊರಡಿಸಿರುವ ಅಧಿಸೂಚನೆ ಪ್ರಕಾರ ಸದರಿ ಯೋಜನೆಯು ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ. ಈ ನಿಟ್ಟನಲ್ಲಿ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಹಾಗೂ ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ಅದರಂತೆ ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಇವರು ಸದರಿ ಯೋಜನೆ Terms of Reference (ಟಿಓಆರ್) ಅನ್ನು ಅಂತಿಮಗೊಳಿಸಿ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಲು ಕೋರುವಂತೆ ತಿಳಿಸಿರುತ್ತಾರೆ. ಶ್ರೀ. ಬಿ ಡಿ ಕೆಂಚರೆಡ್ಡಿರವರ, ಸರ್ವೆ ನಂ. 87(ಪಿ). ಕಾಮಕೇರಿ ಗ್ರಾಮ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ. ಇವರಿಗೆ ತಿಳಿಸಿರುತ್ತಾರೆ. ಸದರಿ ಯೋಜನೆಯ ಅದಿಭೋಗದಾರರು ಪತ್ರದ ದಿನಾಂಕ: 28-02-2022 ರ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಕೋರಿರುತ್ತಾರೆ. ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ, ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ವಿಸ್ತರಣಾ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದಲ್ಲಿ ಪತ್ರಿಕೆಗಳಾದ "ವಿಜಯವಾಣಿ" (ಕನ್ನಡ) ಮತ್ತು "ಇಂಡಿಯನ್ ಎಕ್ಸಪ್ರೆಸ್" (ಆಂಗ್ಲ ಭಾಷೆ)ಯಲ್ಲಿ ದಿನಾಂಕ: 10-05-2022 ರಂದು ಹಾಗೂ ಸ್ಥಳೀಯ ಮಟ್ಟದ **"ವಿಜಯ ಕರ್ನಾಟಕ"** ದಿನ ಪತ್ರಿಕೆಯಲ್ಲಿ ದಿನಾಂಕ: 11-05-2022 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲೂ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಇದುವರೆಗೆ ಲಿಖಿತ ರೂಪದಲ್ಲಿ ಸಲಹೆ, ಅನಿಸಿಕೆಗಳನ್ನು, ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ಸಾರ್ವಜನಿಕರು ಸಲ್ಲಿಸಿರುವುದಿಲ್ಲ.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: 10-06-2022 ರಂದು ಬೆಳಿಗ್ಗೆ 11:45 ಘಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀ ಜಗದೀಶ. ಐ. ಎಚ್. ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ-1 ಇವರು ಶ್ರೀ ನಿತೇಶ್ ಕೆ ಪಾಟೀಲ, ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಶ್ರೀ. ರಾಜಶೇಖರ ಪುರಾಣಿಕ, ಹಿರಿಯ ಪರಿಸರ ಅಧಿಕಾರಿಗಳು (ಪ್ರಭಾರಿ), ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಧಾರವಾಡ ಮತ್ತು ರಾಮದುರ್ಗ ತಹಶೀಲ್ದಾರ ರವರಿಗೂ ಸಹ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಮತ್ತು ಪರಿಸರ ಪ್ರೇಮಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ (ಹತ್ತು ಕಛೇರಿಗಳು) ಇಡಲಾಗಿತ್ತು ಎಂದು ತಿಳಿಸಿದರು. ಸಭೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ಸಲಹೆಗಾರರಾದ ಮೆ: ಹಾರಿಜೋನ್ ವೆಂಚರ್ಸ್, ಬೆಂಗಳೂರು ಇವರು ಯೋಜನೆಯ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು **ಅನುಬಂಧ-5** ರಲ್ಲಿ ಲಗತ್ತಿಸಲಾಗಿದೆ.

ಶ್ರೀ. ಜಗದೀಶ್ ಐ. ಹೆಚ್, ಪರಿಸರ ಅಧಿಕಾರಿಗಳು, ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು ಹೇಳುವುದಿದ್ದರೆ ವೇದಿಕೆ ಹತ್ತಿರ ಬಂದು ತಮ್ಮ ಹೆಸರು, ಊರು ಮತ್ತು ಅಭಿಪ್ರಾಯಗಳನ್ನು ತಿಳಿಸಬೇಕು ಎಂದರು.

ಸಾರ್ವಜನಿಕರು ವ್ಯಕ್ತಪಡಿಸಿದ ಅನಿಸಿಕೆಗಳು ಈ ಕೆಳಗಿನಂತಿವೆ.

1. **ಶ್ರೀ. ರಾಮಪ್ಪ ತಿಮ್ಮಪ್ಪ ಮರೆಗುದ್ದಿ, ಹಲಕಿ ಗ್ರಾಮ:** ಈ ಗಣಿಗಾರಿಕೆ ಮಾಡುವುದರಿಂದ ಎಲ್ಲರಿಗೂ ಕೆಲಸಕ್ಕೆ ಅನುಕೂಲವಾಗುತ್ತದೆ ಮತ್ತು ಒಳ್ಳೆಯದಾಗುತ್ತದೆ.

2. **ಶ್ರೀಕಾಂತ ಅಪ್ಪಣ್ಣ ಕೆಂಚರೆಡ್ಡಿ, ಹಲಕಿ ಗ್ರಾಮ**: ಈ ಗಣಿಗಾರಿಕೆ ಮಾಡುವುದರಿಂದ ಯಾವುದೇ ತೊಂದರೆ ಇರುವುದಿಲ್ಲ.

3. **ಶ್ರೀ. ತಿಮ್ಮನಗೌಡ ಗೌಡಪ್ಪಗೌಡ ಪಾಟೀಲ್, ಕಮಕೇರಿ ಗ್ರಾಮ**: ಈ ಗಣಿಗಾರಿಕೆ ಮಾಡುವುದರಿಂದ ಯಾವುದೇ ತೊಂದರೆ ಇರುವುದಿಲ್ಲ.

4. **ಶ್ರೀ. ಆರ್ ಹೆಚ್ ಅರಕೇರಿ, ಪಕ್ಕದ ಜಮೀನಿನ ಮಾಲೀಕರು, ಕಮಕೇರಿ ಗ್ರಾಮ**: ನಮ್ಮದು ಪಕ್ಕದ ಜಮೀನು ಈ ಗಣಿಗಾರಿಕೆ ಮಾಡುವುದರಿಂದ ನಮಗೆ ಯಾವುದೇ ತೊಂದರೆ ಇರುವುದಿಲ್ಲ.

5. **ಶ್ರೀ. ವಾಯ್ ಎಸ್ ಪಾಟೀಲ್, ಕಮಕೇರಿ ಗ್ರಾಮ** : ಈ ಗಣಿಗಾರಿಕೆ ಮಾಡುವುದರಿಂದ ನಮ್ಮದು ಯಾವುದೇ ಅಭ್ಯಂತರ ಇರುವುದಿಲ್ಲ, ಕೆಲಸವನ್ನು ಮಾಡಬಹುದು.

6. **ಶ್ರೀ. ಭೀಮಪ್ಪ ರಾಮಪ್ಪ ಹಿತ್ತಲಿ, ಕಮಕೇರಿ ಗ್ರಾಮ** : ನಮ್ಮದು ಸರ್ವೆ ನಂ. 85/1 ಇವರ ಪಕ್ಕದ ಜಮೀನು ಗಣಿಗಾರಿಕೆ ಮಾಡುವುದರಿಂದ ಯಾವುದೇ ತೊಂದರೆ ಇರುವುದಿಲ್ಲ.

7. **ಶ್ರೀ. ಕೃಷ್ಣಪ್ಪ ಕೊಳಚಿ, ಕಮಕೇರಿ ಗ್ರಾಮ**: ನಮ್ಮದು ಪಕ್ಕದ ಜಮೀನು ಈ ಗಣಿಗಾರಿಕೆ ಮಾಡುವುದರಿಂದ ನಮಗೆ ಏನೂ ತೊಂದರೆ ಇರುವುದಿಲ್ಲ.

8. **ಶ್ರೀ. ಯಂಕಣ್ಣ ಬಿರಾದಾರ, ಕಮಕೇರಿ ಗ್ರಾಮ**: ಈ ಗಣಿಗಾರಿಕೆ ಮಾಡುವುದರಿಂದ ನಮಗೆ ಯಾವುದೇ ತೊಂದರೆ ಇರುವುದಿಲ್ಲ ಗಣಿಗಾರಿಕೆ ಮಾಡಬಹುದು.

9. **ಶ್ರೀ. ಹನುಮಂತಗೌಡ ಕಲ್ಲಪ್ಪಗೌಡ ಪಾಟೀಲ್, ಕಮಕೇರಿ ಗ್ರಾಮ**: ನಮ್ಮದು ಸರ್ವೆ ನಂ. 80 ಇಲ್ಲೆ ಇದೆ ಜಮೀನು. ಗಣಿಗಾರಿಕೆ ಮಾಡುವುದರಿಂದ ಯಾವುದೇ ತೊಂದರೆ ಇಲ್ಲ ಉದ್ಯೋಗ ಅವಕಾಶಗಳು ಸಿಗುತ್ತವೆ ಅದಕ್ಕಾಗಿ ಅವಕಾಶ ಮಾಡಿಕೊಡಿ ಎಂದು ತಿಳಿಸಿದರು.

ಮಾನ್ಯ ಜಿಲ್ಲಾಧಿಕಾರಿಗಳು, ಮರೆಗುದ್ದಿ ಯಂಕಪ್ಪ ತಮ್ಮನ್ನಪ್ಪ ಯಾರು? ನಿಮ್ಮದು ಮತ್ತೆ ಬಿ ಡಿ ಕೆಂಚರೆಡ್ಡಿ ಇಬ್ಬರದು ಜಮೀನು ಜಂಟೀ ಇದೆ. ನೀವು ಅವರಿಗೆ ಏನು ಆಗಬೇಕು? ಪಾರ್ಟನರ ಇದ್ದಿರಿ. ಆದರೆ ಇದರಲ್ಲಿ ವಿವರಗಳನ್ನು ಕೊಟ್ಟಿದ್ದಿರಾ? ಕಬೂಲ್ ಇದೆ ಅಂತಾ ಪತ್ರವನ್ನು ಬರೆದು ಕೊಡಬೇಕಾಗುತ್ತೆ ಎಂದು ತಿಳಿಸಿದರು. ಅದಕ್ಕೆ ಶ್ರೀ. ಯಂಕಪ್ಪ ತಮ್ಮನ್ನಪ್ಪ ಮರೆಗುದ್ದಿರವರು ತಾವು ಹೇಳಿದ ಹಾಗೆ ಪತ್ರವನ್ನು ತಮಗೆ ಸಲ್ಲಿಸುತ್ತೇವೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾಧಿಕಾರಿಗಳು ಉಪನಿರ್ದೇಶಕರು ಗಣಿ ಮತ್ತು ಭೂ-ವಿಜ್ಞಾನ ಇಲಾಖೆಯವರಿಗೆ ಕೆಂಚರೆಡ್ಡಿ ಅವರದು 120000 ಟನ್ ಪ್ರತಿ ವರ್ಷಕ್ಕೆ ಇದೆ. ಅದರೆ ಪಕ್ಕದಲ್ಲಿ ಇನ್ನೊಂದು ಗಣಿಗಾರಿಕೆ ಇದೆಯಲ್ಲಾ ಅದರ ಗಣಿಗಾರಿಕೆ ಪ್ರಮಾಣ ಎಷ್ಟು ಎಂದು ಕೇಳಿದರು.

ಉಪನಿರ್ದೇಶಕರು ಗಣಿ ಮತ್ತು ಭೂ-ವಿಜ್ಞಾನ ಇಲಾಖೆ, ಬೆಳಗಾವಿ ಅವರು ಮಾತನಾಡಿ ಪಕ್ಕದ ಗಣಿಗಾರಿಕೆ ಪ್ರಮಾಣ ವರ್ಷಕ್ಕೆ 50000 ಟನ್ ಇದೆ ಅಂತಾ ತಿಳಿಸಿದರು. ಒಂದು ಟನ್ ಗೆ ರೂ. 80/- ರಾಯಲಿಟಿ ಇದೆ ಮತ್ತು ಮಾರ್ಕೆಟ್ ಪ್ರೈಸ್ ರೂ. 350-450 ಕ್ವಾಲಿಟಿ ಮೇಲೆ ಇರಬಹುದು ಎಂದು ತಿಳಿಸಿದರು.

ಮಾನ್ಯ ಜಿಲ್ಲಾಧಿಕಾರಿಗಳು: ಇವರದು ಎಲ್ಲಾ ಜೆ ಕೆ ಸಿಮೆಂಟ್ ಮತ್ತು ದಾಲ್ಮಿಯಾ ಸಿಮೆಂಟ್ ಕಾರ್ಖಾನೆಯವರೆ ಖರೀದಿ ಮಾಡುತ್ತಾರಾ ಹೇಗೆ ಎಂದು ಕೇಳಿದರು.

ಉಪನಿರ್ದೇಶಕರು ಗಣಿ ಮತ್ತು ಭೂ-ವಿಜ್ಞಾನ ಇಲಾಖೆ, ಬೆಳಗಾವಿ ಅವರು ಇಲ್ಲಾ ಸರ್ ಅವರದೆಲ್ಲಾ ಕ್ಯಾಪ್ಟಿವ್ ಮೈನ್‌ಗಳಿವೆ. ಆದರೆ ಜೆಕೆ ಸಿಮೆಂಟ್ ಬಾಗಲಕೊಟ ಜಿಲ್ಲೆಯಲ್ಲಿ ಬರುತ್ತೆ, ಹಾಗೂ ದಾಲ್ಮಿಯಾ ಸಿಮೆಂಟ್ ಯಾದವಾಡ, ಬೆಳಗಾವಿ ಜಿಲ್ಲೆಯಲ್ಲಿ ಬರುತ್ತೆ. ಅವರದು 700 ಎಕರೆ ಪಟ್ಟಾ ಜಮೀನಿನಲ್ಲಿ ಸ್ವಂತ ಗಣಿಗಾರಿಕೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾಧಿಕಾರಿಗಳು: ಹಾಗಾದರೆ ನೀವು ಗಣಿಗಾರಿಕೆ ಮಾಡಿ ಯಾರಿಗೆ ಕೊಡುತ್ತಿರಾ ಎಂದು ಗಣಿಗಾರಿಕೆಯ ಮಾಲೀಕರಿಗೆ ಪ್ರಶ್ನಿಸಿದರು.
ಗಣಿಗಾರಿಕೆಯ ಮಾಲೀಕರು: ಸರ್ ನಾವು ಸುಣ್ಣದ ಭಟ್ಟಿಗಳಿಗೆ ಸರಬರಾಜು ಮಾಡುತ್ತೇವೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾಧಿಕಾರಿಗಳು: ಮತ್ತೆ ಯಾರಾದರು ಸಾರ್ವಜನಿಕರು ಯಾವುದಾದರು ಆಕ್ಷೇಪಣೆಗಳು ಇದ್ದರೆ ಮಾತನಾಡಬಹುದು ಆಮೇಲೆ ಅನುಮತಿ ಕೊಟ್ಟ ಮೇಲೆ ಸಮಸ್ಯೆಗಳನ್ನು ತರಬಾರದು. ಅನುಮತಿ ಕೊಟ್ಟ ಮೇಲೆ ಅವರಿಂದ ಮಾಲಿನ್ಯ ಆಗುತ್ತಿದೆ ಬೇರೆ ಬೇರೆ ಸಮಸ್ಯೆಗಳನ್ನು ತರಬಾರದು. ಯಾಕಂದ್ರೆ ಈಗ ಯಾರು ಮಾತನಾಡುತ್ತಿಲ್ಲ. ಊರಿಗೆ ಅನೂಕೂಲವಾಗುತ್ತದೆ ಎಂದು ಹೇಳುತ್ತಿದ್ದಿರಿ. ಮೇಲೆ ಈಗಾಗಲೇ ಅಕ್ಕಪಕ್ಕದಲ್ಲಿ ಗಣಿಗಾರಿಕೆಗಳು ಚಾಲನೆಯಲ್ಲಿ ಇದ್ದಾವೆ ಅವುಗಳಿಂದ ಏನಾದರು ಗ್ರಾಮಗಳಿಗೆ ಸಮಸ್ಯೆ ಇದ್ದರೆ, ಇವಾಗಲೇ ಬಂದು ಮಾತನಾಡಬೇಕು.

ಆಮೇಲೆ ಕಮಕೇರಿ ಲೈಮಸ್ಟೋನ್ ಮೈನ್ಸನವರು ಶಾಲೆಗಳ ಜಿರ್ಣೋದ್ದಾರಕ್ಕೆ ಹಣ ಕೊಡುತ್ತೇನೆ ಎಂದು ಹೇಳಿದ್ದಾರೆ. ಅದು ಬರಿ ಮಾತಾಗಬಾರದು ಅದನ್ನು ಅವರು ಮಾಡಬೇಕು. ಇಲ್ಲಾಂದ್ರೆ ನಮ್ಮ ಹತ್ತಿರ ಬನ್ನಿ ಯಾಕಂದ್ರೆ ಲಿಖಿತವಾಗಿ ಕೊಟ್ಟಿದ್ದಾರೆ, ಶಾಲೆಗೆ, ವಿದ್ಯಾರ್ಥಿ, ದೇವಸ್ಥಾನಕ್ಕೆ ಕೊಡುತ್ತೇವೆ ಅಂತಾ ಹೇಳಿದ್ದಾರೆ. ಅದನ್ನೆಲ್ಲಾ ಕೊಡಬೇಕು, ಅವರು ಕಮಕೇರಿ ಗ್ರಾಮದ ಜೆ ಎಸ್ ಪಿ ಎಸ್ ಶಾಲೆಗೆ ಕುಡಿಯುವ ನೀರಿನ ಟ್ಯಾಂಕ್‌ಗೆ ರೂ. 120000/-, ಕಮಕೇರಿ ಗ್ರಾಮದ ದೇವಸ್ಥಾನ ಜಿರ್ಣೋದ್ದಾರಕ್ಕೆ ರೂ. 120000/-, ಮೇರಿಟ್ ವಿದ್ಯಾರ್ಥಿ ವೇತನ ರೂ. 120000/-, ಸಾರಿಗೆ ಅಭಿವೃದ್ಧಿ ಹಾಗೂ ಆರೋಗ್ಯ ಶಿಬಿರ ರೂ. 120000/-, ಶಾಲೆಗಳಿಗೆ ಮೂಲ ಸೌಕರ್ಯ ರೂ. 120000/-, ಒಟ್ಟು ರೂ. 600000/- ಗ್ರಾಮಕ್ಕೆ ಕೊಡುತ್ತೇವೆ ಎಂದು ಹೇಳಿದ್ದಾರೆ,

ಈಗ ಯಾರು ಅವರ ಪರವಾಗಿ ಮಾತನಾಡಿದ್ದೀರ, ಅವರು ಗ್ರಾಮದ ಅಭಿವೃದ್ಧಿಗಾಗಿ ಕೆಲಸಗಳನ್ನು ಮಾಡಿಸಿಕೊಳ್ಳಬೇಕು ಮತ್ತು ಇದು ಬೆಳಗಾವಿ ಮತ್ತು ಬಾಗಲಕೋಟ ಜಿಲ್ಲೆಯ ಲಾಸ್ಟ ಬಾರ್ಡರನಲ್ಲಿ ಇದೆ. ಅದಕ್ಕೆ ಇಲ್ಲಿ ಎಲ್ಲಾ ಅಧಿಕಾರಿಗಳು ಇದ್ದಾರೆ, ಡಿಡಿ ಮೈನ್ಸ್, ತಹಶೀಲ್ದಾರ, ಹಿರಿಯ ಪರಿಸರ ಅಧಿಕಾರಿಗಳು ಆರು ಜಿಲ್ಲೆಗೆ ಸಂಬಧಪಟ್ಟವರು ಇದ್ದಾರೆ. ಏನೇ ಸಮಸ್ಯೆ ಇದ್ದರೂ ಈಗ ತಿಳಿಸಿದಲ್ಲಿ ಪರಿಹಾರ ಬೇಗ ಸಿಗುತ್ತದೆ ಎಂದು ತಿಳಿಸಿದರು. ಮತ್ತು ಇದು ಒಂದುಸಾರಿ ಪರವಾನಿಗೆ ಕೊಟ್ಟಮೇಲೆ, 50 ವರ್ಷ ಲೀಸ್ ಇರುತ್ತದೆ. ಈ ಸಭೆಯಲ್ಲಿ ನಕಾರಾತ್ಮಕವಾಗಿ ಯಾರೂ ಮಾತನಾಡಿರುವುದಿಲ್ಲ.

ವಂದನಾರ್ಪಣೆಯೊಂದಿಗೆ ಈ ಸಭೆಯು ಮುಕ್ತಾಯಗೊಂಡಿತು.

(ನಿತೇಶ್. ಕೆ. ಪಾಟೀಲ)
ಜಿಲ್ಲಾಧಿಕಾರಿಗಳು
ಜಿಲ್ಲಾದಂಡಾಧಿಕಾರಿಗಳು ಮತ್ತು ಪರಿಸರ ಸಾರ್ವಜನಿಕ
ಆಲಿಕೆ ಸಭೆ ಅಧ್ಯಕ್ಷರು, ಬೆಳಗಾವಿ.